೧	೨	೩	೪	೫	೬
೧೦೨	ಆಲ್‌ತಬ್–ಇ-ಕರ್ನಾಟಕ	೬೨೧೦	೨೪೬೦೦	೨೦೭೫	೩೨೮೪೫
೧೦೩	ನವಧ್ವನಿ	೭೯೮೨	೩೧೪೫೫	೧೪೫೫೮	೫೫೯೯
೧೦೪	ಮೂನು ನ್ಯೂಸ್	೧೮೪೪	೫೮೬೮೫	೧೮೩೨೦	೭೧೪೪೯
೧೦೫	ಪೌರಧ್ವನಿ	೨೬೨೮	೨೮೪೦೨	೯೭೫೦	೪೧೦೧೦
೧೦೬	ಮೈಸೂರು ಮಿತ್ರ	–	೨೫೭೦	೬೦೦	೩೧೭೦
೧೦೭	ಸಮಾಚಾರ	೮೭೫೫	೧೪೪೭೪	೫೦೦	೨೭೭೫೩
೧೦೮	ಆರತಿ	–	–	೧೯೮೦	೧೯೮೦
೧೦೯	ಶಾಂತವಾಣಿ	–	–	೪೪೬೦	೪೪೬೦
೧೧೦	ವಿಜಯ	೧೩೬೫	೯೨೫	–	೨೨೯೦
೧೧೧	ಶಕ್ತಿ	೧೪೨೫೫	೨೯೩೭೬	೫೬೫೬	೫೩೨೪೭
೧೯೨	ನಗರಧೂತ	೨೧೪೩	೭೨೫೦	೧೨೪೦	೧೮೬೭೩
೧೧೩	ಆರುಣ	–	–	೩೦೦೦	೩೦೦೮
೧೧೪	ವರ್ತಮಾನ	೯೫೮	–	–	೯೫೦
೧೧೫	ಟೈಮ್ಸ್ ಆಫ್ ಇಂಡಿಯಾ	೪೧೩೬೮	–	೧೧೧೬೮	೫೨೫೫೬
	ಒಟ್ಟು ರೂ.	೮೬೫೧೪೭೬	೮೫೯೯೪೬೫	೨೭೯೧೪೮೧	೧೯೬೭೪೨೨೨

ಡಿ. ಸಿ. ಸಿ. ಬ್ಯಾಂಕ್ ನೌಕರರ ವೇತನದ ಬಗ್ಗೆ

೨೯೩೩ ಶ್ರೀ ಬಿ. ಆರ್. ನೀಲಕಂಠಪ್ಪ, (ತರೀಕೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಎಲ್ಲಾ ಡಿ. ಸಿ. ಸಿ. ಬ್ಯಾಂಕ್ ನೌಕರರ ವೇತನ ಶ್ರೇಣಿಯನ್ನು ಹೆಚ್ಚಿಸಲು ಸರ್ಕಾರಕ್ಕೆ ಮನವಿಗಳೇನಾದರೂ ಬಂದಿವೆಯೇ ?

ಆ) ಹಾಗಿದ್ದಲ್ಲಿ ಇದನ್ನು ಕಾರ್ಯ ರೂಪಕ್ಕೆ ತರಲು ಇರುವ ತೊಂದರೆಯೇನು ? ಹಾಗೂ ಎಂದಿನಿಂದ ಅನುಷ್ಠಾನಕ್ಕೆ ತರಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು):—

ಅ) ಬಂದಿದೆ.

ಆ) ಚಿಕ್ಕಮಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ. ಇದರ ನೌಕರರಿಗೆ ದಿನಾಂಕ ೧–೭–೮೪ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಗಳನ್ನು ಸಹಕಾರ ಸಂಘಗಳ ನಿಬಂಧಕರು ಮಂಜೂರು ಮಾಡಿ ದಿನಾಂಕ ೧೫–೧೧–೮೯ರಲ್ಲಿ ಆದೇಶ ಹೊರಡಿಸಿದ್ದಾರೆ. ಮತ್ತು ಈ ವೇತನ ಶ್ರೇಣಿಗಳು ಕೊನೆಯ ಪಕ್ಷ ೫ ವರ್ಷಗಳ ಅವಧಿಯ ಕಾಲ ಜಾರಿಯಲ್ಲಿರತಕ್ಕದ್ದೆಂದು ಷರತ್ತನ್ನು ವಿಧಿಸಲಾಗಿದೆ. ಈ ಷರತ್ತಿನ ಪ್ರಕಾರ ದಿನಾಂಕ ೩೦–೬–೮೯ರವರೆಗೆ ಬ್ಯಾಂಕಿನಲ್ಲಿ ವೇತನ ಶ್ರೇಣಿ ಪರಿಷ್ಕರಣ ಕಾರ್ಯ ನಡೆಯುವುದಿಲ್ಲ.

ರಾಜ್ಯದಲ್ಲಿ ಸೌರಶಕ್ತಿ ವಿದ್ಯುತ್ ಉತ್ಪಾದನೆ

೨೯೪೬ ಶ್ರೀ ಬಿ. ಆರ್. ನೀಲಕಂಠನಪ್ಪವರು (ತರೀಕೆರೆ) .—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸೌರಶಕ್ತಿ ಉತ್ಪಾದನಾ ಯೋಜನೆ ಇದೆಯೆ?